ರಾಜ್ಯದಲ್ಲಿನ ಪೋಲೀಸ್ ಠಾಣೆಗಳ ಬಗ್ಗೆ

858 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪೋಲೀಸ್ ಠಾಣೆಗಳ ಸಂಖ್ಯೆ ಎಷ್ಟು?

ಆ) ರಾಜ್ಯದಲ್ಲಿ ಈ ಸಾಲಿನಲ್ಲಿ ಎಷ್ಟು ಪೋಲೀಸ್ ಠಾಣೆಗಳನ್ನು ತೆರೆಯುವ ಉದ್ದೇಶವಿದೆ. ಹಾಗೂ ಎಷ್ಟು ಪೋಲೀಸ್ ಸಿಬ್ಬಂದಿಯನ್ನು ನೇಮಿಸಿಕೊಳ್ಳಲಾಗುವುದು?

ಶ್ರೀ ಧರ್ಮಸಿಂಗ್ (ಗೃಹ ಸಚಿವರು):

ಅ) ರಾಜ್ಯದಲ್ಲಿ 679 ಪೋಲೀಸ್ ಠಾಣೆಗಳು ಇರುತ್ತವೆ.

ಆ) 1,000 ಜನ ಹೆಚ್ಚಿನ ಪೋಲೀಸ್ ಸಿಬ್ಬಂದಿಯೊಡನೆ 15 ಹೊಸ ಪೋಲೀಸ್ ಠಾಣೆಗಳನ್ನಾದರೂ ತೆರೆಯುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಶಿಗ್ಗಾಂವ ಮತ್ತು ಸವಣೂರ್ ನಗರಗಳಲ್ಲಿ ಮಿನಿ ಕ್ರೀಡಾಂಗಣ ಪ್ರಾರಂಭಿಸುವುದರ ಬಗ್ಗೆ.

859 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ ಮತ್ತು ಸವಣೂರ್ ನಗರಗಳಲ್ಲಿ ಮಿನಿ ಕ್ರೀಡಾಂಗಣ ಪ್ರಾರಂಭಿಸಬೇಕಾಗಿರುವುದು ಸಹಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಇನ್ನೂ ಎಷ್ಟು ದಿವಸಗಳಲ್ಲಿ ಅವನ್ನು ಪ್ರಾರಂಭಿಸಲಾಗುವುದು?

ಶ್ರೀ ಎಸ್. ರಮೇಶ್ (ವಾರ್ತಾ ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ಮತ್ತು ಕನ್ನಡ ಮತ್ತು ಸಂಸ್ಕೃತಿ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ದ. ಕನ್ನಡ ಜಿಲ್ಲೆಯಲ್ಲಿ ಕೋವಿ ಪರವಾನಗೆ ನವೀಕರಣ ವಿಳಂಬವಾಗುವುದರ ಬಗ್ಗೆ

830 - ಶ್ರೀ ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) 1990-91ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಬೇರೆ ಬೇರೆ ತಾಲ್ಲೂಕುಗಳಲ್ಲಿ ಕೋವಿ ಪರವಾನಗೆ ನವೀಕರಣಕ್ಕಾಗಿ ಬಂದ ಅರ್ಜಿಗಳೆಷ್ಟು?

2) ಅವುಗಳಲ್ಲಿ ನವೀಕರಿಸಲಾದ ಮತ್ತು ತಿರಸ್ಕರಿಸಲಾದ ಅರ್ಜಿಗಳೆಷ್ಟು?

3) ಈ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳದೇ ಇರುವಂತಹ ಅರ್ಜಿಗಳ ಸಂಖ್ಯೆ ಎಷ್ಟು?

4) ಬಾಕಿ ಇರುವ ಅರ್ಜಿಗಳ ಬಗ್ಗೆ ಕೈಗೊಳ್ಳಲುದ್ದೇಶಿಸಿರುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಗೃಹ ಸಚಿವರು):

1) 4304

2) ನವೀಕರಿಸಲಾದ ಅರ್ಜಿ.4230

3) 74